ಅಸಲು ದಾವಾ ನಂ. 257/2022
ಪಿ ಡಬ್ಲ್ಯು -1

ದಿನಾಂಕಃ 11-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ- ಪ್ರತಿವಾದಿ ನಂ.2 ರಿಂದ 4 ಪರ ಶ್ರೀ. ಕೆ ಎಸ್ ಜೆ ವಕೀಲರಿಂದ.**

ಖರೀದಿ ಕರಾರು ಪತ್ರ ಆಗುವ ಸಮಯದಲ್ಲಿ ಪ್ರತಿವಾದಿ ನಂ.2 ರಿಂದ 4 ಇವರು ಹಾಜರು ಇದ್ದರು. ಅವರ ಸಹಿಯನ್ನು ಖರೀದಿ ಕರಾರು ಪತ್ರದ ಮೇಲೆ ಪಡೆದುಕೊಂಡಿಲ್ಲ. ದಾವಾ ಆಸ್ತಿಯು ಪ್ರತಿವಾದಿ ನಂ.2 ರಿಂದ 4 ಇವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯು ಊರಿಗೆ ಹತ್ತಿರ ಇರುವುದರಿಂದ ಪ್ರತಿ ಎಕರೆಗೆ ರೂ.1 ಕೋಟಿ ಮಾರುಕಟ್ಟೆ ಬೆಲೆ ಇರುತ್ತದೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿ ಜಮೀನು ಒಂದು ಎಕರೆಗೆ ರೂ.96 ಲಕ್ಷದಂತೆ ಮಾರುಕಟ್ಟೆ ಬೆಲೆ ಠರಾಯಿಸಿ ಕರಾರು ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಹಾಗೇ ವ್ಯವಹಾರ ಆಗಿದ್ದರೂ ಖರೀದಿ ಕರಾರು ಪತ್ರದಲ್ಲಿ ಕಡಿಮೆ ಮಾರುಕಟ್ಟೆ ಬೆಲೆ ಕಾಣಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.2 ಇವರ ಗಂಡ ರವಿ ಇವರು ಕುಡಿತದ ದುಶ್ಚಟಕ್ಕೆ ಈಡಾಗಿದ್ದರು ಎಂದರೆ ಸರಿಯಲ್ಲ. ಹಾಗೇ ರವಿ ಇವರು ಕುಡಿತ ಚಟ ಹೊಂದಿದ್ದರೂ ಹೊಂದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.2 ರಿಂದ 4 ಇವರ ಆಸ್ತಿಗಳಲ್ಲಿ ಇಲ್ಲಿಯವರೆಗೂ ಯಾವುದೇ ಪಾಲು ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿಯೂ ಸಹ ಪಾಲು ಆಗಿಲ್ಲ ಎಂದರೆ ಸರಿಯಲ್ಲ. ನಿಪಿ-1 ದಾವಾ ಆಸ್ತಿಯ ಪಹಣಿ ಇನ್ನೂ ಜಂಟಿ ಸಾಗುವಳಿದಾರರನ್ನು ಹೊಂದಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಎಲ್ಲಾ ಪ್ರತಿವಾದಿಯರ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಯರೊಂದಿಗೆ ಮಾಡಿಕೊಂಡ ವ್ಯವಹಾರ ಅದು ಪ್ರತಿವಾದಿ ನಂ.2 ರಿಂದ 4 ಇವರಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಹಣ ಕೊಟ್ಟ ಬಗ್ಗೆ ಪ್ರತಿವಾದಿ ನಂ.2 ರಿಂದ 4 ಇವರಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಖರೀದಿ ಕರಾರು ಪತ್ರಕ್ಕೆ ಪ್ರತಿವಾದಿ ನಂ.2 ಇವರು ಪಕ್ಷಗಾರರು ಆಗಿಲ್ಲ ಎಂದರೆ ಸರಿ. ಆದ್ದರಿಂದ ಪ್ರತಿವಾದಿ ನಂ.3 ಮತ್ತು 4 ಇವರ ವಿರುದ್ಧ ಕರಾರಿನ ನಿರ್ಧಿಷ್ಟ ನಿರ್ವಹಣೆ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕುರಿತು ಖರೀದಿ ವ್ಯವಹಾರ ಪೂರೈಸಲು ಪ್ರತಿವಾದಿ ನಂ.3 ಮತ್ತು 4 ಇವರಿಗೆ ಅಜ್ಞಾನ ಸಂರಕ್ಷಣೆದಾರರು ಅಂತಾ ನೇಮಿಸಲು ನ್ಯಾಯಾಲಯದಲ್ಲಿ ನನ್ನ ಮೂಲಕ ಅವರ ಅಜ್ಜಿಯಿಂದ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.